ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM2/83/2022

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:07-12-2022.

**-:: ಸು ತ್ತೋ ಲೆ ::-**

**ವಿಷಯ:** 2022-23ನೇ ಸಾಲಿನ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ 3 & 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಹಾಗೂ ಪಾಲಿಟೆಕ್ನಿಕ್ ವರ್ಗಾವಣೆಗೆ ಪ್ರವೇಶಾವಧಿ ವಿಸ್ತರಿಸುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 14-10-2022 (ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್)
2. ಈ ಕಛೇರಿ ಸುತ್ತೋಲೆ ಪತ್ರ ಸಂ. DTE-ADMI0ACM2/84/2022 ದಿ:14-10-2022. (ಖಾಸಗಿ ಪಾಲಿಟೆಕ್ನಿಕ್)

*********

2022-23ನೇ ಸಾಲಿನಲ್ಲಿ 3 & 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅಂತಿಮ ದಿನಾಂಕ:05-12-2022 ಎಂದು ಉಲ್ಲೇಖ(1)ರ ದಿ:14-10-2022ರ ಸುತ್ತೋಲೆಯಲ್ಲಿ ನಿಗಧಿಪಡಿಸಲಾಗಿತ್ತು. ಮುಂದುವರೆದಂತೆ, ನವೆಂಬರ್-2022ರ Make up ಪರೀಕ್ಷೆಯ ಫಲಿತಾಂಶ ಪ್ರಕಟಗೊಳ್ಳುವ ಸಂಭವ ಇರುವುದರಿಂದ ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅರ್ಹ ಅಭ್ಯರ್ಥಿಗಳ 3 & 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶಾವಧಿಯನ್ನು ಈ ಕೆಳಕಂಡಂತೆ ವಿಸ್ತರಿಸಿ ಪ್ರವೇಶ ಪಡೆಯಲು ಅನುಮತಿ ನೀಡಲಾಗಿದೆ.

- **3 & 5ನೇ ಸೆಮಿಸ್ಟರ್ ಪ್ರವೇಶ ಹಾಗೂ ಮರುಪ್ರವೇಶ ಪಡೆಯಲು ದಿನಾಂಕ:14-12-2022 ರ ಒಳಗೆ ಯಾವುದೇ ದಂಡ ಶುಲ್ಕವಿಲ್ಲದೆ ಪ್ರವೇಶ ನೀಡುವುದು.**
- **3 & 5ನೇ ಸೆಮಿಸ್ಟರ್ ಪಾಲಿಟೆಕ್ನಿಕ್ ವರ್ಗಾವಣೆ ಸಂಬಂಧ ದಿನಾಂಕ:14-12-2022 ರ ಒಳಗೆ ವರ್ಗಾವಣೆ ಶುಲ್ಕ ರೂ.1,000/- ನ್ನು ಪಾವತಿಸಿರುವುದನ್ನು ಪರಿಶೀಲಿಸಿ ಪ್ರವೇಶ ನೀಡುವುದು.**

ಮೇಲ್ಕಂಡಂತೆ ವಿಸ್ತರಿಸಲಾದ ಅವಧಿಯಲ್ಲಿ ಪ್ರವೇಶ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ. 03 ಮತ್ತು 05ನೇ ಸೆಮಿಸ್ಟರ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವುದನ್ನು **ಖಚಿತಪಡಿಸಿಕೊಂಡು ಪ್ರವೇಶ ನೀಡತಕ್ಕದ್ದು.** ಮೇಲ್ಕಂಡ ಅವಧಿ ವಿಸ್ತರಣೆ ಹೊರತುಪಡಿಸಿ ಉಲ್ಲೇಖ(1) & (2)ರಲ್ಲಿನ **ಸುತ್ತೋಲೆಗಳಲ್ಲಿ ಯಾವುದೇ** ಬದಲಾವಣೆಗಳು ಇರುವುದಿಲ್ಲ.

ತಾಂತ್ರಿಕ ಪರೀಕ್ಷಾ ಮಂಡಳಿ ನಿಯಮಗಳನ್ವಯ ಹಾಜರಾತಿಯನ್ನು ಪೂರೈಸುವ ಷರತ್ತಿಗೊಳಪಟ್ಟು ಮೇಲ್ಕಂಡ ಅವಧಿಯಲ್ಲಿ ಸದರಿ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುವಂತೆ ಪ್ರವೇಶ ನೀಡತಕ್ಕದ್ದು. ನಿಯಮಗಳನ್ನು ಮೀರಿ ಮಾಡಿದ ಪ್ರವೇಶಗಳಿಗೆ ಸಂಬಂಧಿಸಿದ ಪ್ರಿನ್ಸಿಪಾಲರೇ ನೇರ ಜವಾಬ್ದಾರರಾಗುತ್ತಾರೆ. ಪ್ರಯುಕ್ತ, ಇದನ್ನು ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

*ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.*

7/12/22

**ಜಂಟಿ ನಿರ್ದೇಶಕರು(ಆಡಳಿತ)**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

ಇವರಿಗೆ,

*ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರುಗಳಿಗೆ - ಮಾಹಿತಿಗಾಗಿ ಮತ್ತು ಸೂಕ್ತ ಅನುಸರಣೆಗಾಗಿ.*

<u>ಪ್ರತಿ ಇವರಿಗೆ ಮಾಹಿತಿಗಾಗಿ:</u>

1. ಆಯುಕ್ತರವರ ಆಪ್ತಶಾಖೆಗೆ.
2. ನಿರ್ದೇಶಕರವರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರವರ ಆಪ್ತಶಾಖೆಗೆ.
4. ಕಾರ್ಯದರ್ಶಿಯವರ ಆಪ್ತಶಾಖೆಗೆ.
5. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ.
6. ಇ-ಗವರ್ನೆನ್ಸ್ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7. ಆರ್.ಡಿ.ಎಂ ವಿಭಾಗಗಳಿಗೆ.
8. ಇಆರ್‌ಎಸ್(3) ವಿಭಾಗಕ್ಕೆ.
9. ಕಛೇರಿ ಪ್ರತಿ.